ಈ ಕಥೆಗಳು ಸಮಾಜೋ ಆರ್ಥಿಕ ಸಮಾನತೆಗಾಗಿ ಆಗ್ರಹಿಸುತ್ತವೆ. ಇದು ಲೇಖಕರ ಸಾಮಾಜಿಕ ಬದ್ಧತೆಯ ಮೂಲ ಪ್ರೇರಣೆಯಿಂದ ಉದಿಸಿದ್ದಾಗಿದೆ.

'ಕಿರುಬನ್ಕಲ್' ಈ ಸಂಕಲನದಲ್ಲಿ ಅತ್ಯಂತ ಹೆಚ್ಚು ಚರ್ಚೆಗೆ ಒಳಪಡಬೇಕಾದ ಕಥೆಯಾಗಿದೆ. ಈ ಕಥಾಹೆಣಿಗೆಯ ತಂತ್ರಗಾರಿಕೆ, ಅಭಿವ್ಯಕ್ತಿಯ ಶೈಲಿ, ಭಾಷೆಯ ಕಲಾತ್ಮಕ ಬಳಕೆ, ಕಥೆಗಾರರ ಸಾಮಾಜಿಕ ಪ್ರಜ್ಞೆ ಕಾರಣದಿಂದಾಗಿ 'ಕಿರುಬನ್ಕಲ್' ಗಮನ ಸೆಳೆಯುತ್ತದೆ. ತಾತ್ವಿಕ ಸ್ಪರ್ಶ, ಜನಪದೀಯ ಆಚರಣೆಗಳು, ಪುರಾಣ ಮತ್ತು ವಾಸ್ತವಿಕತೆಗಳನ್ನು ಒಂದೇ ಕಟ್ಟಿನಲ್ಲಿ ಬಂಧಿಸುವಲ್ಲಿ ಕಥೆ ಯಶಸ್ವಿಯಾಗಿದೆ. ಇಲ್ಲಿ ಲೇಖಕರ ದಟ್ಟವಾದ ಜೀವನ ಅನುಭವ ಎದ್ದು ಕಾಣಿಸುತ್ತದೆ. ಇತ್ತೀಚೆಗೆ ಪಿಡುಗಾಗಿ ಕಾಡುತ್ತಿರುವ ರೀಲ್ಸ್ ವ್ಯಾಮೋಹ, ವರ್ಣಭೇದ, ಜಾತಿ ಆರಾಧನೆಗಳು ಅಸಹನೆ ಮೂಡಿಸುವಷ್ಟು ಕಥಿಸಿಕೊಂಡಿವೆ.

ಮುಖ್ಯ ಕಥೆಯೊಳಗೆ ಮತ್ತೊಂದು ಕಥೆಯೂ ಮಿಳಿತಗೊಂಡು, ಭೂತಕಾಲ ಹಾಗೂ ವರ್ತಮಾನದ ಸಾಮಾಜಿಕ ಬದುಕಿನ ವಿಡಂಬನೆ ಮಾಡುವ ಪರಿಯಲ್ಲಿ ಹೊಸತನವಿದೆ. ಕಥೆಗಳ ಮಹಾತಾಯಿ ಅಜ್ಜಿಯಾಗಿ – ಕಥೆಗಳು ಕುಟುಂಬ, ನೆರೆಹೊರೆ, ದೇಶ ಭಾಷೆಗಳ ಹಂಗಿಲ್ಲದೆ ಎಲ್ಲವನ್ನು ಮೀರಿ ಬೆಳೆದರೂ ಜಾತಿ ತಾರತಮ್ಯ ಮಾತ್ರ ಕಾಲು ಮುರಿದುಕೊಂಡು ಬಿದ್ದಿದ್ದು, ನಮ್ಮ ಸಮಾಜದ ಸಾಮಾಜಿಕ ಅಸ್ಪೃಶ್ಯತೆಯ ಮೂಲ ಬೇರನ್ನು ಬಿಡಿಸುವುದು ಎಷ್ಟು ಕಠಿಣ ಎಂಬುದನ್ನು ಕಥೆ ತೋರಿಸುತ್ತದೆ.

'ಅವು ಅಂಗೇ' – ಸಂಕಲನದ ಶೀರ್ಷಿಕೆಯೂ ಆದ ಕಥೆಯು ಜಾತಿಯ ಬೇರುಗಳು ಚಾಚಿಕೊಂಡಿರುವ ಆಳ, ಅಗಲ, ವಿಸ್ತಾರಗಳನ್ನು ಪರಿಚಯಿಸುತ್ತದೆ. 'ಅವು ಅಂಗೇ' ಎಂಬ ರೂಪಕ ತಳ ಸಮುದಾಯವನ್ನು ನೇರವಾಗಿ ಬೊಟ್ಟು ಮಾಡಿ ಅವಹೇಳನ ಮಾಡುವ ಸೂಚಕವಾಗಿದೆ. ಇಲ್ಲಿ ಎರಡು ತೆರನಾದ ಶೋಷಣೆ ಕಂಡುಬರುತ್ತದೆ. ಮೇಲ್ ಸ್ತರದವರಿಂದ ಕೆಳಸ್ತರದವರ ಮೇಲೆ ಆಗುವ ತಾರತಮ್ಯ. ತನ್ನದೇ ಶೋಷಿತ ಸಮುದಾಯದ ಮೇಲ್ಪಂಕ್ತಿಯ ಅಧಿಕಾರ ಹೊಂದಿರುವವರು ತಮ್ಮದೇ ಜಾತಿಯ ಜನರ ಮೇಲೆ ನಡೆಸುವ ಆರ್ಥಿಕ ಶೋಷಣೆಯ ಕರಾಳ ರೂಪವನ್ನು ತೋರುತ್ತದೆ. ಈ ಕಥೆ ಮೇಲ್ನೋಟಕ್ಕೆ ಭೂತಕಾಲವನ್ನು ಪ್ರತಿನಿಧಿಸಿದರೂ, ಶೋಷಣೆ ವರ್ತಮಾನದಲ್ಲೂ ಜೀವಂತವಿದ್ದು ಜಾತಿಪದ್ಧತಿಯ ವಿರಾಟ್ ದರ್ಶನ ಮಾಡಿಸುತ್ತದೆ. ಕಥೆಯ ನಾಯಕ ಕದ್ರ ಕಾಂತನಾಗಿ ಹೆಸರು ಬದಲಾಯಿಸಿಕೊಂಡರೂ, ಹಳ್ಳಿಯಿಂದ ನಗರ ಸೇರಿದರೂ, ಬೇತಾಳದಂತೆ ಬೆನ್ನು ಹತ್ತುವ ಜಾತಿ ಅವನನ್ನು ಹಿಂಬಾಲಿಸುವುದು ನಮ್ಮ ಸಮಾಜವಿನ್ನೂ ಜಾತ್ಯತೀತ ಭಾವ ಬೆಳಸಿಕೊಂಡಿಲ್ಲ ಎಂಬ ಕಹಿ ಸತ್ಯವನ್ನ ಅರ್ಥ ಮಾಡಿಸುತ್ತದೆ. 'ನೀವು ಅವಾ, ನಿಮಗೆಲ್ಲ ಉಚಿತ ಬಿಡು, ಫೀಸ್ ಕಟ್ಟಂಗಿಲ್ಲ', 'ಹೆಸರು ಬದಲಾಯಿಸಿಕೊಂಡರೇ ಜಾತಿ ವಾಸ್ನೆ ಎಲ್ಲೋಯ್ತದೆ' ಇಂತಹ ಭಾವತೀವ್ರತೆಯ ಸಾಲುಗಳು ಶೋಷಣೆಯನ್ನು ಕಂಡು ಕಣ್ಣೀರಾಗಿಸುವ ಜೊತೆಗೆ ಓದುಗರನ್ನು ವಿಮರ್ಶೆಗೆ ಒಳಪಡಿಸಿ ಹೃದಯವನ್ನು ಹಿಂಡಿಬಿಡುತ್ತದೆ.

'ಬರ್ಗಲ್ಲು' ಕಥೆ ಗ್ರಾಮೀಣರ ದೈನಿಕ ಬದುಕಿನ ಸಂಸ್ಕೃತಿ, ನಂಬಿಕೆ, ಆಚಾರ ವಿಚಾರಗಳ ಸುತ್ತ ಸುತ್ತುತ್ತದೆ. ಬರಗಾಲಕ್ಕೆ ಕಾರಣವಾದ ಬರ್ಗಲ್ಲನ್ನು ಬೇರೆಡೆ ಸಾಗಿಸುವರು ಯಾರು ಎಂಬ ಪ್ರಶ್ನೆಯೊಂದಿಗೆ ಕಥೆ ಹುಟ್ಟಿಕೊಂಡು, ಇಡೀ ಊರಿನಲ್ಲಿ ಮಳೆಯನ್ನು ತರುವ ಪ್ರಯತ್ನದಲ್ಲಿ ರೂಪಿತವಾಗುತ್ತದೆ. ಹಳ್ಳಿ ಜನರ ಭರಪೂರ ಸಂವೇದನೆಗಳು ಅಚ್ಚರಿ ಮೂಡಿಸುತ್ತವೆ. ಕಥೆಗಾರರು ಒಂದೇ ವಸ್ತುವನ್ನು ಹಲವು ಆಯಾಮಗಳಲ್ಲಿ ನಿರೂಪಿಸಿ ಈ ಕಥೆಯನ್ನು ವಿಶಿಷ್ಟಗೊಳಿಸಿದ್ದಾರೆ. ಸಿಲ್ವರ್ದಮ್ಮ ಮತ್ತು ಲೊಡ್ಡೆಸ್ವಾಮಿಯ ದೈಹಿಕ ಆಕರ್ಷಣೆ, ಮಿಲನದ ಅಪೇಕ್ಷೆಗೆ ಮಳೆಯು ಜೊತೆಯಾಗಿ, ಬೆಂಗಾಡಾಗಿದ್ದ ಅವರ ಬಾಳಲ್ಲಿ ಮತ್ತೆ ವಸಂತನ ಆಗಮನವಾಗುತ್ತದೆ. ಕಾದ ಇಳೆಗೆ ಇನಿಯನ ಮಳೆ ಸಾಂಗತ್ಯ ಬೆಳೆಸಿದರೆ, ಹೆಣ್ಣಿನ ಸಖ್ಯ ಬೆಳೆಸದೆ ಬೆಂಗಾಡಾಗಿದ್ದ ದೊಡ್ಡನಿಗೆ ಸಿಲ್ವರಮ್ಮ ಜೊತೆಯಾಗುವ ಪರಿಯ ಬಣ್ಣನೆ ಪರಿಣಾಮಕಾರಿಯಾಗಿದೆ.

ಕಥೆಗಳಲ್ಲಿ ಬಳಕೆಯಾಗಿರುವ ಹಳ್ಳಿಯಲ್ಲಿ ಬಳಸುವ ಅನ್ವರ್ಥನಾಮಗಳು, ಓದುಗರಿಗೆ ಕಚಗುಳಿ ಇಟ್ಟು ಮನವನ್ನು ಮುದಗೊಳಿಸಿದರೆ, ಇಲ್ಲಿನ ನುಡಿಗಟ್ಟುಗಳು ನಮ್ಮ ಜನರ ನೆಲಮೂಲದ ಸಂಸ್ಕೃತಿಯನ್ನು ಬಗೆದಿಡುತ್ತವೆ. ಒಂದು ಉದಾಹರಣೆ ನೋಡಿ: 'ಆ ವಯಸ್ನೂರ್ಗೆ ತೊಡೆಗೆ ಕಾವು ಬಂದು ಕಾವು ಕಳಕೊಳ್ಳೊಲು ತಾವು ಹುಡುಕ್ತಿದ್ರು'. ಇಂತಹ